ಸುಮಾ ರಮೇಶ್, ಹಾಸನ

*ಜನಸಂಖ್ಯೆ ಹೆಚ್ಚಾದಷ್ಟೂ ಮಾನವನಿಗೆ ಒಂಟಿತನ ಕಾಡುತ್ತಿದೆಯಲ್ಲಾ, ಏಕೆ?*



'ಬೈಟೂ ಟೀ' ಹಂಚಿಕೊಳ್ಳಲು ತಯಾರಿಲ್ಲದವರಿಗೆ ಒನ್ ಟೀ ಅನಿವಾರ್ಯ!

ರತ್ನಜ, ಮೈಸೂರು

*ವಿವಾಹವಾಗಿ ಕಷ್ಟ ಅನುಭವಿಸುತ್ತಿರುವ ಹಲವರನ್ನು ಕಂಡೂ ಮದುವೆಗೆ ಹಪಾಹಪಿಸುವ ಯುವಕರಿಗೆ ನಿಮ್ಮ ಸಂದೇಶ?*

ಹೆರಿಗೆ ಆಸ್ಪತ್ರೆಯ ಮುಂದೆ ಶವವಾಹನ ಹೋಗುತ್ತಿರುತ್ತದೆ. ಹಾಗೆಂದು ಹುಟ್ಟು ಎಂದಿಗೂ ನಿಂತಿಲ್ಲ.

ಕು.ಗೋ., ಉಡುಪಿ

*ರಾಜಕಾರಣಿಗಳು ಆತ್ಮಹತ್ಯೆ ಮಾಡಿಕೊಂಡದ್ದು ಇದೆಯೆ?*

ಆತ್ಮಹತ್ಯೆಯಲ್ಲಿ ಅವರೇ ಫಸ್ಟ್ – ಆತ್ಮನಿಗ್ರಹ, ಆತ್ಮಸಾಕ್ಷಿ, ಆತ್ಮಾಭಿಮಾನ ಮುಂತಾದ ಎಲ್ಲ ಆತ್ಮಗಳನ್ನೂ ಹತ್ಯೆ ಮಾಡಿಕೊಂಡಿರುತ್ತಾರೆ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಅಗರಬತ್ತಿಗೂ, ಸೊಳ್ಳೆಬತ್ತಿಗೂ ಏನು ವ್ಯತ್ಯಾಸ?*



ಒಂದೇ ಅಕ್ಷರ ವ್ಯತ್ಯಾಸ; ಭಕ್ತಸೇವಾನಿರತಗೆ ಅದು; ರಕ್ತಸೇವಾನಿರತಗೆ ಇದು.

ಎಂ.ಎ. ಕುಮಾರ್, ಬೆಂಗಳೂರು

*ಮದುವೆಯ ನಂತರ ಪತಿಯಾದವನು ಪತ್ನಿಯ ಬಗ್ಗೆ ಒಂದು ಕವಿತೆ ಕಟ್ಟಿ ಹಾಡುವುದಿಲ್ಲ. ಏಕೆ?*

ಒಂದೇನು, ನೂರು ಕಟ್ಟಿ ಹಾಡುತ್ತಾನೆ; ಒಂದೇ ಕಂಡೀಷನ್– ಅವಳು ಪರಪತ್ನಿ ಆಗಿರಬೇಕಷ್ಟೆ!

ಕನ್ನಡತಿ ಕನ್ನಡ, ಬೆಂಗಳೂರು

*ನಿಜವಾದ ಕೋಮುವಾದಿ ಯಾರು?*

**co – coexistence** (*ಸಹಬಾಳ್ವೆ*)ಗೆ ಮುಳುವಾದವನೇ ಕೋಮುವಾದಿ.

ನಳಿನಿ ಆರ್. ಮಾಗಲ್, ಸಕಲೇಶಪುರ

*ಇಲ್ಲೊಬ್ಬಾಕೆ ಹಾಡಿಗೆ 'ಸಂಗತಿ'ಯೊಟ್ಟಿಗೆ 'ಭಾವ' ಮುಖ್ಯ ಎಂದರೆ 'ಅಕ್ಕನ ಗಂಡನಾ?' ಎಂದು ಕೇಳುವಳಲ್ಲಾ...?*

ವಾಹ್! ಅಪ್ಪಟ ಅಯೋಗ್ಯತೆ; ಎಲೆಕ್ಷನ್‌ಗೆ ನಿಲ್ಲಿಸಿ; ಸಚಿವೆ ಆಗುವುದು ಗ್ಯಾರಂಟಿ.

ಜೆ. ಪ್ರದೀಪಕುಮಾರ, ಹೂವಿನಹಡಗಲಿ

*ವಿದೇಶೀಯರು ಯೋಗದ ಮೊರೆ ಹೋಗುತ್ತಿರಲು ಕಾರಣವೇನು?*

ರಂ ಗಿಂತ ಓಂ ವಾಸಿ ಎಂದು ತಿಳಿದುದರಿಂದ.

ಕಣ್ಣೂರು ಗೋವಿಂದಾಚಾರಿ, ಮೈಸೂರು

*ಎಣ್ಣೆಯನ್ನು ದೀಪಕ್ಕೆ ಹಾಕಿದರೆ ಬೆಳಕು; ವಾಹನಗಳಿಗೆ ಹಾಕಿದರೆ ಚಲನೆ; ಕುಡುಕರು ಸೇವಿಸಿದರೆ ಚಲನೆಯೂ ಇಲ್ಲ, ಬೆಳಕೂ ಇಲ್ಲ. ಏಕೆ?*

ದೀಪ, ವಾಹನಗಳಲ್ಲಿ ಕಿಡಿ ಇರುತ್ತದಲ್ಲ; ಕಿಡಿ ಇದ್ದಲ್ಲಿ ಬೆಳಕು, ಚಲನೆ; ಕಿಡಿಗೇಡಿ ಇದ್ದಲ್ಲಿ ಅನಿಷ್ಟ, ಅನಾಹುತ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ರೇಷನ್‌ಗೂ, ಫ್ಯಾಶನ್‌ಗೂ ಏನು ಸಂಬಂಧ?*

ಬಟ್ಟೆಯ ರೇಷನ್ನೇ ಫ್ಯಾಶನ್ನು!

ಗೌರಿ ಶೇಷಾದ್ರಿ, ಉತ್ತನಹಳ್ಳಿ

ಮಾತು, ಮೌನ; ಇವುಗಳಲ್ಲಿ ಯಾವುದು ಕ್ಷೇಮ?

ಮೋದಿಯಂತಿದ್ದರೆ ಮಾತು; ರಾಹುಲನಂತಿದ್ದರೆ ಮೌನ.

ಮಹಾವೀರ ಕಾಸರ, ಶಿವಮೊಗ್ಗ

*ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಎನ್ನುವುದರ ಅರ್ಥವೇನು?*

ಡಯಟ್ ಮಾಡುತ್ತಿದ್ದಾನೆ, ಬಳಸಿದ ಹೆಣ್ಣುಗಳೆಲ್ಲ ಅವನನ್ನು ಡಿಯರ್ ಎನ್ನದೆ ಬ್ರದರ್ ಎನ್ನುತ್ತಿದ್ದಾರೆ ಎಂದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

*ಕೆಲಸ ಮತ್ತು ಬದುಕು; ಇವುಗಳ ಅರ್ಥವೇನು?*

ಬದುಕು ಪ್ರಯಾಣ; ಮನುಜ ವಾಹನ; ಕೆಲಸ ಇಂಧನ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

*ಟಿಪ್ಪು ಜಯಂತಿಯಂದು ಟಿಪ್ಪುವಿನ ವೇಷ ಧರಿಸಿದ ಮುಖಂಡರು ಮಹಾಮಸ್ತಕಾಭಿಷೇಕದಂದು ಯಾವ ವೇಷ ಧರಿಸುತ್ತಾರೆ?*

ಆವೇಶ; ಬಾಹುಬಲಿಯ ನಿರ್ಮಲ ನಗೆ ಧರಿಸಲೂ ಅರ್ಹತೆ ಇಲ್ಲದವರಿಗೆ ನಗ್ನತೆ ಧರಿಸುವುದು ಅಸಾಧ್ಯ.

ಎಸ್.ಜಿ. ಕರನಂದಿ, ಹುನಗುಂದ

*ಲಂಚ, ಮಂಚ, ಕುಂಚ; ಈ ಮೂರರ ಮಹತ್ವವೇನು ಸ್ವಾಮಿ?*

ಕ್ರಮವಾಗಿ ಅರೆಸ್ಟು, ರೆಸ್ಟು, ಇಂಟರೆಸ್ಟುಗಳಿಗೆ ಎಡೆ ಮಾಡುವುದು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ನಿಮ್ಮ ಪ್ರಕಾರ 'ನೋಟ್ ಬ್ಯಾನ್' ಒಂದೇ ಭ್ರಷ್ಟಾಚಾರ ತಡೆಗಟ್ಟಲು ಸಾಧ್ಯವೆ?*



ಊಹೂಂ. ಭ್ರಷ್ಟಾಚಾರದಲ್ಲಿ ತೊಡಗಿದರೆ ಬಿಡಿಸುವೆ ಗ್ರಹಚಾರ ಎಂದು ಪ್ರತಿ ಗೃಹಿಣಿ ಸಿಡಿದೇಳುವ ವರೆಗೆ ಭ್ರಷ್ಟತೆಗೆ ತಡೆಯಿಲ್ಲ.

ಕೆ.ಎಂ. ವೀರೇಶ, ಕೂಡ್ಲಿಗಿ

*ಆದರಿಸಿ, ಅಭಿಮಾನದಿಂದ ಪ್ರಶಸ್ತಿ ಫಲಕಗಳ ನೀಡಿ ಮೂರ್ಖನನ್ನು ಹೊಗಳಿದರೆ ಏನಾಗುವುದು ರಾಮ್?*

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭವಾಗುವುದು ವೀರಣ್ಣ.

ವಿ. ಹಮೀದ್, ವಿಟ್ಲ

*ಕಲ್ಯಾಣಮಂಟಪದಿಂದ ವಧು/ವರ ಓಡಿಹೋಗಲು ಕಾರಣವೇನು?*

ವಾಹನದಲ್ಲಿ ಹೋದರೆ ಟ್ರಾಫಿಕ್ ಜ್ಯಾಮ್/ಸಿಗ್ನಲ್‌ನಲ್ಲಿ ಸಿಕ್ಕಿಹಾಕಿಕೊಳ್ಳುವರೆಂಬ ಭಯ!

ಜಾಕೋಬ್ ಡಿಸೋಜ, ಕುರುವಳ್ಳಿ

*ಸಮಾನತೆ ಎಲ್ಲಿದೆ?*

ಮಾತೆಯ ಹೃದಯ ಎಲ್ಲೆಲ್ಲಿದೆಯೋ ಅಲ್ಲಲ್ಲಿ.

■ ರಾಮ್